ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಕಾರ್ಮಿಕ ಸಂಪುಟ (ಕೇಂದ್ರ)

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯ ಕರ್ನಾಟಕ

ದಿನಾಂಕ : DATE : 04/07/2019

# ಕಾರ್ಮಿಕರಿಗಾಗಿ ವೇತನ ಸಂಹಿತೆ ವಿಧೇಯಕ

**ಕೇಂದ್ರ ಸಂಪುಟ ಸಭೆ**

**ಹೊಸದಿಲ್ಲಿ:** ಕಾರ್ಮಿಕರ ಕಾನೂನು ಸುಧಾರಣೆ ನಿಟ್ಟಿನಲ್ಲಿ ನರೇಂದ್ರ ಮೋದಿ ನೇತೃತ್ವದ ಸರಕಾರ ಮಹತ್ವದ ಹೆಜ್ಜೆ ಇರಿಸಿದೆ. ಸುಮಾರು 44 ಕಾರ್ಮಿಕ ಕಾಯಿದೆಗಳು ವಿಲೀನಗೊಂಡ ನೂತನ ವೇತನ ಸಂಹಿತೆ ವಿಧೇಯಕವನ್ನು ಪ್ರಸ್ತುತ ನಡೆಯುತ್ತಿರುವ ಅಧಿವೇಶನದಲ್ಲಿ ಮಂಡಿಸಲು ಬುಧವಾರ ನಡೆದ ಸಚಿವ ಸಂಪುಟ ಸಭೆ ಸಮ್ಮತಿ ನೀಡಿದೆ. ಕಾರ್ಮಿಕರ ಹಕ್ಕುಗಳ ರಕ್ಷಣೆ ಹಾಗೂ ಕಲ್ಯಾಣಕ್ಕೆ ಒತ್ತು ನೀಡಲಾಗಿರುವ ಈ ವಿಧೇಯಕದಲ್ಲಿ ಕನಿಷ್ಠ ವೇತನ, ಕೈಗಾರಿಕಾ ಸಂಬಂಧಗಳು, ಸಾಮಾಜಿಕ ಭದ್ರತೆ ಹಾಗೂ ಕೈಗಾರಿಕಾ ಭದ್ರತೆ ಮತ್ತು ಕಲ್ಯಾಣಕ್ಕೆ ಪ್ರತ್ಯೇಕ ನಿಯಮಗಳನ್ನು ರಚಿಸಲಾಗಿದೆ.

ಸಂಘಟಿತ ಮತ್ತು ಅಸಂಘಟಿತ ವಲಯಗಳ ಎಲ್ಲ ಕಾರ್ಮಿಕರಿಗೂ ಇದು ಅನ್ವಯಿಸಲಿದೆ. ವಿಧೇಯಕ ಅನುಮೋದನೆ ಪಡೆದಲ್ಲಿ ರೈಲ್ವೆ, ಗಣಿ ಸೇರಿದಂತೆ ಪ್ರಮುಖ ಕ್ಷೇತ್ರಗಳಲ್ಲಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸಬೇಕು ಎಂಬ ಕಾನೂನು ಜಾರಿಗೆ ಬರಲಿದೆ. ಈ ಮೂಲಕ ಕನಿಷ್ಠ ವೇತನ ಕೂಡ ಸಿಗದೆ ಪರದಾಡುತ್ತಿರುವ ಲಕ್ಷಾಂತರ ಕಾರ್ಮಿಕರಿಗೆ ಅನುಕೂಲವಾಗಲಿದೆ.

ಹೊಸ ಕಾನೂನು ಜಾರಿ ಬಳಿಕ ಉದ್ಯೋಗ ಸೃಷ್ಟಿಯಾಗುವ ಹಲವು ಕ್ಷೇತ್ರಗಳಲ್ಲಿ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಮಾಡಲು ರಾಜ್ಯ ಸರಕಾರಗಳಿಗೆ ಮುಕ್ತ ಅವಕಾಶ ಕೂಡ ಸಿಗಲಿದೆ.

## ಮಂಗಳೂರು ಸೇರಿ 3 ಏರ್‌ಪೋರ್ಟ್ ಗುತ್ತಿಗೆ

ಸರಕಾರ-ಖಾಸಗಿ ಸಹಭಾಗಿತ್ವದ(ಪಿಪಿಪಿ) ಅಡಿಯಲ್ಲಿ ಮಂಗಳೂರು ವಿಮಾನ ನಿಲ್ದಾಣ ಸೇರಿದಂತೆ ದೇಶದ ಒಟ್ಟು ಮೂರು ವಿಮಾನ ನಿಲ್ದಾಣಗಳ ನಿರ್ವಹಣೆಯನ್ನು ಖಾಸಗಿ ಕಂಪನಿಗಳಿಗೆ ಗುತ್ತಿಗೆ ನೀಡಲು ಸಚಿವ ಸಂಪುಟ ಸಭೆ ಸಮ್ಮತಿಸಿದೆ. ಸದ್ಯ ವಿಮಾನ ನಿಲ್ದಾಣ ಪ್ರಾಧಿಕಾರವು ಇವುಗಳ ನಿರ್ವಹಣೆ ಮಾಡುತ್ತಿದೆ. ಈಗಾಗಲೇ ಹರಾಜು ಪ್ರಕ್ರಿಯೆ ಮುಕ್ತಾಯಗೊಂಡಿದ್ದು ಜೈಪುರ, ಗುವಾಹಟಿ ಹಾಗೂ ತಿರುವನಂತಪುರ ವಿಮಾನನಿಲ್ದಾಣಗಳ ನಿರ್ವಹಣೆ ಗುತ್ತಿಗೆಯನ್ನು ಅದಾನಿ ಸಮೂಹ ಪಡೆದುಕೊಂಡಿದೆ.

### ಇತರ ನಿರ್ಧಾರಗಳು

- ಅರೆಸೈನಿಕ ಪಡೆ ಅಥವಾ ಕೇಂದ್ರೀಯ ಸಶಸ್ತ್ರ ಪಡೆಯ (ಸಿಎಪಿಎಫ್) 'ಎ' ದರ್ಜೆ ಅಧಿಕಾರಿಗಳಿಗೆ ಸಂಘಟಿತ ವಲಯದ 'ಎ' ಸೇವೆ ಹಾಗೂ ಸೌಲಭ್ಯ (ಒಜಿಎಎಸ್) ಒದಗಿಸಲು ಒಪ್ಪಿಗೆ.
- ಭಾರತ-ಮಾಲ್ಡೀವ್ಸ್ ನಡುವೆ ಸಮುದ್ರದ ಮೂಲಕ ಪ್ಯಾಸೆಂಜರ್ ಹಾಗೂ ಸರಕು ಸಾಗಣೆ ವ್ಯವಸ್ಥೆ ನಿರ್ಮಾಣದ ಒಪ್ಪಂದಕ್ಕೆ ಸಮ್ಮತಿ.

